








ಸೆಕೋಯ ನ್ಯಾಷನಲ್ ಪಾರ್ಕ್‌ನಲ್ಲಿ ಲೇಖಕರು

# ದೈತ್ಯ ಮರಗಳ ಸೆಕೋಯ

■ ಚಿತ್ರ–ಲೇಖನ: **ಮಂಜುಳಾ ರಾಜ್**

ಸೆಕೋಯ ರಾಷ್ಟ್ರೀಯ ಉದ್ಯಾನವನಕ್ಕೆ ನಾವಿರುವ ಫ್ರೀಮಾಂಟಿನಿಂದ ನಾಲ್ಕೂವರೆ ಘಂಟೆ ಪ್ರಯಾಣ. ನಮ್ಮ ಪಶ್ಚಿಮ ಘಟ್ಟದ ರಸ್ತೆಗಳನ್ನು ನೆನಪಿಸುವ ಸುತ್ತಿ ಸುತ್ತಿ ಮೇಲೇರುವ ದಾರಿ. ಆದರೆ ರಸ್ತೆಗಳು ಬಹಳ ಅನುಕೂಲಕರವಾಗಿವೆ. ಪ್ರಕೃತಿಯ ಸಿರಿಯನ್ನು ಸವಿಯುತ್ತ ಸಾಗಿದಾಗ ದಾರಿ ಸವೆದದ್ದೇ ಗೊತ್ತಾಗಲಿಲ್ಲ. ಮುಂದೆ ಸಾಗಿದರೆ ಎತ್ತರದ ಸೆಕೋಯ ಮರಗಳು. ದೈತ್ಯ ಮತ್ತು ದಪ್ಪನೆಯ ಕಾಂಡದ ಆ ಮರಗಳ ಮುಂದೆ ನಾವು ನಿಂತಾಗ ಮಾನವನೆಷ್ಟು ಕುಬ್ಜ ಎನಿಸಿತು.

ನಾಲ್ಕು ಲಕ್ಷ ಎಕರೆಗಳಷ್ಟು ವಿಸ್ತಾರವಾದ ಸೆಕೋಯ ರಾಷ್ಟ್ರೀಯ ಉದ್ಯಾನವನ ಅಮೆರಿಕಾದ ಕ್ಯಾಲಿಫೋರ್ನಿಯಾ ರಾಜ್ಯದಲ್ಲಿದೆ. 14ಸಾವಿರದ ಐನೂರೈದು ಅಡಿ ಎತ್ತರದಲ್ಲಿರುವ ಈ ಸೆಕೋಯ ಉದ್ಯಾನವನ ಗ್ರಾಂಡ್ ಕ್ಯಾನನ್ ಪಾರ್ಕಿಗೆ ಹೊಂದಿಕೊಂಡಂತಿದೆ. ಈ ಉದ್ಯಾನವನ ದೈತ್ಯಾಕಾರದ ಎತ್ತರದ ಸೆಕೋಯ ಮರಗಳಿಗೆ ಪ್ರಸಿದ್ಧಿ. ಅದರಲ್ಲೂ ದೊಡ್ಡದೆನಿಸಿಕೊಂಡ ಜನರಲ್ ಶೆರ್ಮನ್ ಮರವನ್ನು ನೋಡಲೆಂದೇ ಪ್ರವಾಸಿಗರು ಬರುತ್ತಾರೆ. ಈ ಶೆರ್ಮನ್ ಮರ ತಳ ಭಾಗದಲ್ಲಿ ಮೂವತ್ತೈದೂವರೆ ಅಡಿ ಅಗಲವಾಗಿದೆ. ಬೃಹತ್ ಎತ್ತರ ಮತ್ತು ಗಾತ್ರದ ಈ ಮರ 300ಅಡಿ ಎತ್ತರವಿದೆ. ಅತೀ ಪುರಾತನ  ಮತ್ತು ಹೆಚ್ಚು ಜೀವವಾಹಿನಿಯನ್ನು ಹೊಂದಿರುವ ಮರವೆನಿಸಿಕೊಂಡಿದೆ. ಶೆರ್ಮನ್ ಮರವನ್ನು ನೋಡಲು ಅಚ್ಚುಕಟ್ಟಾದ ಕಾಲು ದಾರಿ ಮತ್ತು ಮೆಟ್ಟಲುಗಳನ್ನು ಮಾಡಿದ್ದಾರೆ. ವಿಕಲಚೇತನರಿಗೆ ಸುಲಭವಾಗುವಂತೆ ಪ್ರತ್ಯೇಕ ಹತ್ತಿರದ ದಾರಿ ಇದೆ. ಅಲ್ಲೇ ಹತ್ತಿರದಲ್ಲಿ ವಾಹನವನ್ನು ನಿಲ್ಲಿಸಿ ನೋಡಲು ಅನುಕೂಲವನ್ನು ಕಲ್ಪಿಸಲಾಗಿದೆ.

ಪ್ರಪಂಚದಲ್ಲಿರುವ ಅತೀ ದೊಡ್ಡ ಮರಗಳಲ್ಲಿ ಹತ್ತರಲ್ಲಿ ಐದು ಮರಗಳು ಸೆಕೋಯಾದ ಈ ಜೈಂಟ್ ಫಾರೆಸ್ಟ್ ಅರ್ಥಾತ್ ದೈತ್ಯ ಕಾಡಿನಲ್ಲಿದೆ. ಅಲ್ಲಿ ಉರುಳಿ ಬಿದ್ದಿರುವ ಒಂದು ಮರದ ಕಾಂಡವನ್ನು ಮಧ್ಯದಲ್ಲಿ ಚೌಕಾಕಾರವಾಗಿ ಕತ್ತರಿಸಲಾಗಿದೆ. ಅಲ್ಲಿ ಸರಾಗವಾಗಿ ಇಬ್ಬರು ಹಾದು ಹೋಗಬಹುದು. ಇದೇ ಸೆಕೋಯದ ಜೈಂಟ್ ಉದ್ಯಾನವನದಲ್ಲಿ ಮರದ ಕಾಂಡದ ಮಧ್ಯದಲ್ಲಿ ಒಂದು ಕಾರು ಹಾದು ಹೋಗುವಷ್ಟು ದೊಡ್ಡ ಮರವಿದೆ. ಈ ದೈತ್ಯ ಮರಗಳ ಮಧ್ಯೆ ಮಾನವ ಎಷ್ಟು ಕುಬ್ಜನೆನಿಸುತ್ತಾನೆ.

ಹಿಂದಿರುಗುವ ದಾರಿಯಲ್ಲಿ ಸ್ಯಾನ್ ಸಮೋನ್ ಬೀಚಿನಲ್ಲಿ ದೊಡ್ಡಗಾತ್ರದ ಎಲಿಫೆಂಟ್ ಸೀಲ್‌ಗಳ ದರ್ಶನ ಮಾಡಬಹುದು. ಬಿಸಿಲಿಗೆ ನೀರಿನಿಂದ ಹೊರ ಬಂದು ಮಲಗಿರುವ ಈ ದೊಡ್ಡ ಗಜಗಾತ್ರದ ಸೀಲ್‌ಗಳನ್ನು ನೋಡಲು ವಿಸ್ಮಯವೆನಿಸುತ್ತದೆ. ಬಿಸಿಲಿಗೆ ಅಥವಾ ತಳಿಯನ್ನು ಮುಂದುವರೆಸಲು, ಚರ್ಮದ ಪೊರೆಯನ್ನು ಕಳಚಿಕೊಳ್ಳಲು ಮತ್ತು ತನ್ನ ಮರಿಗೆ ಜನ್ಮ ನೀಡಲು ಇಲ್ಲಿಗೆ ಮತ್ತೆ ಮತ್ತೆ ಬರುತ್ತಲೇ ಇರುತ್ತವೆ. ಹೀಗಾಗಿ ಸಂಖ್ಯೆಯಲ್ಲಿ ಹೆಚ್ಚು ಕಡಿಮೆ ಇದ್ದರೂ ಈ ಎಲಿಫೆಂಟ್ ಸೀಲ್‌ಗಳು ನೋಡಲು ಸದಾ ಸಿಗುತ್ತವೆ.